■ ಶಶಿಕುಮಾರ್ ಸಿ.

# ಗೂಗಲ್ ಮ್ಯಾಪ್ಸ್: ಇನ್ನಷ್ಟು ಆಪ್ತ

ವಿದೇಶಗಳಲ್ಲಿ ಚಾಲ್ತಿಯಲ್ಲಿರುವ 'Prefer fuel–efficient routes' ಫೀಚರ್ ಅನ್ನು ಭಾರತದಲ್ಲೂ ಬಿಡುಗಡೆ ಮಾಡಲು ಗೂಗಲ್ ಮ್ಯಾಪ್ಸ್ ಮುಂದಾಗಿದೆ. ಇದು ಬಿಡುಗಡೆಗೊಂಡರೆ ವಾಹನ ಸಂಚಾರ ಮಾಡುವವರಿಗೆ ಕೊಂಚ ಅನುಕೂಲವಾಗಲಿದೆ.

ಸ್ಮಾರ್ಟ್‌ಫೋನ್ ಬಳಸುವ ಬಹುತೇಕರು 'ಗೂಗಲ್ ಮ್ಯಾಪ್ಸ್' ಬಳಸುತ್ತಾರೆ. ಗೊತ್ತಿಲ್ಲದ ಸ್ಥಳಕ್ಕೆ ಹೋಗುವಾಗ ಅಥವಾ ಬೆಂಗಳೂರಿನಂತಹ ನಗರ ಪ್ರದೇಶಗಳಲ್ಲಿ ವಿಳಾಸ ಹುಡುಕಲು ನೆರವಿಗೆ ಬರುವ ಗೂಗಲ್ ಮ್ಯಾಪ್ಸ್‌ನ ಹೊಸ ಫೀಚರ್ ಅಮೆರಿಕ, ಕೆನಡ ಹಾಗೂ ಯೂರೋಪ್‌ನಲ್ಲಿ ಮಾತ್ರ ಲಭ್ಯವಿದೆ. ಶೀಘ್ರವೇ ಇದು ಭಾರತಕ್ಕೂ ಕಾಲಿಡಲಿದೆ.

ಗೂಗಲ್ ಮ್ಯಾಪ್ಸ್‌ನಲ್ಲಿ ಬಳಕೆದಾರರು ತಾವು ತಲುಪಬೇಕಾದ ವಿಳಾಸ ಹಾಗೂ ತಲುಪಲು ಬಳಸುತ್ತಿರುವ ವಾಹನದ ಮಾಹಿತಿಯನ್ನು ನಮೂದಿಸಿದರೆ ಸಾಕು – ನಿಗದಿತ ಸ್ಥಳಕ್ಕೆ ಹೋಗಲು ಎಷ್ಟು ಇಂಧನ ಅಗತ್ಯ ಎಂಬಿತ್ಯಾದಿ ಮಾಹಿತಿಯನ್ನು ಅದು ತಿಳಿಸುತ್ತದೆ. ಯಾವ ಮಾರ್ಗದಲ್ಲಿ ತಲುಪಿದರೆ ಕಡಿಮೆ ಇಂಧನ ಖರ್ಚಾಗುತ್ತದೆ ಎಂಬುದನ್ನೂ ಸೂಚಿಸುತ್ತದೆ. ಅಲ್ಲದೆ, ಲೈವ್ ಟ್ರಾಫಿಕ್ ಅಪ್‌ಡೇಟ್‌ಗಳನ್ನು ಕಾಲಕಾಲಕ್ಕೆ ನೀಡುತ್ತಲೇ ಅದಕ್ಕೆ ತಕ್ಕಂತೆ ಇಂಧನ ಅವಶ್ಯಕತೆಯ ಬಗ್ಗೆಯೂ ಎಚ್ಚರಿಸುತ್ತದೆ. ಲೈವ್ ಟ್ರಾಫಿಕ್ ಅಪ್‌ಡೇಟ್ಸ್ ಹಾಗೂ ರಸ್ತೆಗಳ ಪರಿಸ್ಥಿತಿಗಳನ್ನು ಪರಿಗಣಿಸಿ, ಬೇರೆ ಬೇರೆ ಮಾರ್ಗಗಳಲ್ಲಿ ಸಂಚಾರ ಮಾಡಲು ಸವಾರ ಹಾಗೂ ಚಾಲಕರಿಗೆ ಸಲಹೆ ನೀಡುವುದರ ಜೊತೆಗೆ ಇಂಧನ ದಕ್ಷತೆಯ ಮಾಹಿತಿ ಸೂಚಿಸುತ್ತದೆ.

### ಫೀಚರ್ ಆನ್ ಹೇಗೆ?

- ಆ್ಯಪ್ ಅಪ್‌ಡೇಟ್ ಮಾಡಿಕೊಳ್ಳಿ.
- ಆ್ಯಪ್ ತೆರೆದು ಪ್ರೊಫೈಲ್ ಟ್ಯಾಪ್ ಮಾಡಿ, ನಂತರ ಸೆಟ್ಟಿಂಗ್ಸ್ ತಲುಪಿ.
- ಬಳಿಕ ಕಾಣುವ 'ಮಾರ್ಗ' ಆಯ್ಕೆ ಒತ್ತಿ.
- ನಂತರ ಪರಿಸರಸ್ನೇಹಿ ರೂಟಿಂಗ್ ಆನ್ ಮಾಡಲು 'ಇಂಧನ ಸಮರ್ಥ ಮಾರ್ಗಗಳಿಗೆ ಆದ್ಯತೆ ನೀಡಿ' ಎಂಬ ಆಯ್ಕೆ ಒತ್ತಿ.
- ವಿಳಾಸ ನಮೂದಿಸಿ, ಡೈರೆಕ್ಷನ್ ಆಯ್ಕೆ ಆಯ್ದುಕೊಳ್ಳಿ.
- ಆ್ಯಪ್‌ನ ಕೆಳಭಾಗದ ಬಾರ್‌ನಿಂದ ಮೇಲಕ್ಕೆ ಸ್ವೈಪ್ ಮಾಡಿದರೆ, ಎಂಜಿನ್ ಪ್ರಕಾರ ಬದಲಿಸುವ ಆಯ್ಕೆ ಕಾಣುತ್ತದೆ. ಅದನ್ನು ಒತ್ತಿ.
- ವಾಹನದ ಎಂಜಿನ್ ಬಗ್ಗೆ ನಮೂದಿಸಿ ಸಬ್ಮಿಟ್ ಕೊಡಿ. ■

## ಮೆಸೇಜ್ ಪಿನ್ ಮಾಡಿ

ಇಮೇಲ್‌ನಲ್ಲಿ ಲಭ್ಯವಿರುವ ಪಿನ್ ಮಾಡುವ ಆಯ್ಕೆಯ ಮಾದರಿಯಂತೆ ವಾಟ್ಸ್‌ಆ್ಯಪ್ ಸಹ ತನ್ನ ಬಳಕೆದಾರರಿಗೆ ಮೆಸೇಜ್ ಪಿನ್ ಮಾಡುವ ಹೊಸ ಫೀಚರ್ ಬಿಡುಗಡೆ ಮಾಡಲಿದೆ. ಈ ಫೀಚರ್ ಮೂಲಕ ಚಾಟ್‌ನಲ್ಲಿರುವ ಪ್ರಮುಖ ಸಂದೇಶಗಳನ್ನು ಪಿನ್ ಮಾಡುವ ಅವಕಾಶವನ್ನು ಗ್ರಾಹಕರು ಪಡೆಯಲಿದ್ದು, ಶೀಘ್ರದಲ್ಲಿ ಇದು ಬಳಕೆದಾರರಿಗೆ ಲಭ್ಯವಾಗಲಿದೆ.

ಈಚೆಗಷ್ಟೇ ಈ ಹೊಸ ಅಪ್‌ಡೇಟ್ ಬಗ್ಗೆ ಮಾಹಿತಿ ನೀಡಿರುವ ವಾಟ್ಸ್‌ಆ್ಯಪ್, ಚಾಟ್‌ನಲ್ಲಿರುವ ಪ್ರಮುಖ ಸಂದೇಶವನ್ನು ಹುಡುಕುವ ಕೆಲಸವನ್ನು ಬಳಕೆದಾರರಿಗೆ ಇನ್ನಷ್ಟು ಸುಲಭವಾಗಿಸಲಿದೆ.

ಈ ಫೀಚರ್‌ನಿಂದಾಗಿ, ಬಳಕೆದಾರರು ತಮಗೆ ಅಗತ್ಯವಾದ ಮೆಸೇಜ್‌ಗಳನ್ನು ಒಮ್ಮೆಗೆ ಒಂದು ಬಾರಿಯಂತೆ ಪಿನ್ ಮಾಡಬಹುದು. ಹೆಚ್ಚಾಗಿ ವಾಟ್ಸ್‌ಆ್ಯಪ್‌ನಲ್ಲಿ ಕಚೇರಿ ಹಾಗೂ ಇನ್ನಿತರ ಗಮನಾರ್ಹ ಕೆಲಸಗಳನ್ನು ನಿರ್ವಹಿಸುವಾಗ ಇದು ಅನುಕೂಲಕ್ಕೆ ಬರಲಿದೆ. ಟೆಕ್ಸ್ಟ್ ಮೆಸೇಜ್‌ಗಳು, ಫೋಟೊಗಳು, ಇಮೋಜಿ – ಹೀಗೆ ಎಲ್ಲ ರೀತಿಯ ಸಂದೇಶಗಳನ್ನು ಪಿನ್ ಮಾಡುವ ಅವಕಾಶವು ಲಭ್ಯವಾಗಲಿದೆ.

ಪಿನ್ ಮಾಡಿದ ಮೆಸೇಜ್‌ಗಳು ಚಾಟ್ ಬಾಕ್ಸ್‌ನ ಮೇಲೆ ಬ್ಯಾನರ್‌ನ ಹಾಗೆ ಕಾಣಿಸಿಕೊಳ್ಳುತ್ತವೆ. ಇದರಿಂದ ಬಳಕೆದಾರರಿಗೆ ಹುಡುಕುವ ಕೆಲಸ ತಪ್ಪುತ್ತದೆ. ಏಕಕಾಲದಲ್ಲಿ ಜಗತ್ತಿನೆಲ್ಲೆಡೆ ಈ ಫೀಚರ್ ಒದಗಿಸುವ ನಿಟ್ಟಿನಲ್ಲಿ ಕೆಲಸ ನಡೆಯುತ್ತಿದೆ ಎಂದು ವಾಟ್ಸ್‌ಆ್ಯಪ್ ತಿಳಿಸಿದೆ.

**ಪಿನ್ ಮಾಡುವುದು ಹೇಗೆ?**

ಚಾಟ್‌ನಲ್ಲಿ ಮೆಸೇಜ್ ಮೇಲೆ ಒತ್ತಿ ಹಿಡಿದು, ಕಾನ್‌ಟೆಕ್ಸ್ಟ್ ಮೆನುವಿನಲ್ಲಿ ಹೊಸದಾಗಿ ಕಾಣಿಸಿಕೊಳ್ಳಲಿರುವ ಪಿನ್ ಆಯ್ಕೆಯನ್ನು ಒತ್ತಬೇಕು. ಹೀಗೆ ಮಾಡಿದ ತಕ್ಷಣ ಆ ಸಂದೇಶ ಚಾಟ್ ಬಾಕ್ಸ್ ಮೇಲೆ ದೊಡ್ಡದಾಗಿ (ಬ್ಯಾನರ್ ಹಾಗೆ) ಕಾಣಿಸುತ್ತದೆ. ಪಿನ್ ಮಾಡಿದ ಸಂದೇಶ ಎಷ್ಟು ಗಂಟೆ ಅಥವಾ ಎಷ್ಟು ದಿನ ಇರಬೇಕು ಎಂಬುವುದನ್ನು ಬಳಕೆದಾರರು ಸೆಟ್ ಮಾಡಿಕೊಳ್ಳಬಹುದು. ಇದಕ್ಕಾಗಿ 24 ಗಂಟೆ, 7 ದಿನ, 30 ದಿನ ಹೀಗೆ ಹಲವು ಆಯ್ಕೆಗಳನ್ನು ನೀಡಲಾಗುತ್ತದೆ. ■

## ಥ್ರೆಡ್ಸ್‌ನಲ್ಲಿ ಟ್ರೆಂಡಿಂಗ್ ಟಾಪಿಕ್ಸ್!

ಎಕ್ಸ್‌ಗೆ (ಟ್ವಿಟ್ಟರ್) ಪ್ರತಿಸ್ಪರ್ಧಿಯಾಗಿ ಬಿಡುಗಡೆಗೊಂಡ ಮೆಟಾ ಒಡೆತನದ 'ಥ್ರೆಡ್ಸ್ ಆ್ಯಪ್', ಪ್ರಾರಂಭದಲ್ಲಿ ಎಕ್ಸ್‌ನಷ್ಟೇ ಜನಪ್ರಿಯತೆ ಗಳಿಸುವ ನಿರೀಕ್ಷೆ ಹುಟ್ಟುಹಾಕಿತ್ತಾದರೂ ಕ್ರಮೇಣ ಮಂಕಾಯಿತು. ಹೀಗಾಗಿ, ಥ್ರೆಡ್ಸ್‌ನ ವೇಗ ಹೆಚ್ಚಿಸುವ ಸಲುವಾಗಿ 'ಟ್ರೆಂಡಿಂಗ್ ಟಾಪಿಕ್ಸ್' ಎಂಬ ಫೀಚರ್ ಬಿಡುಗಡೆ ಮಾಡಲು ಕಂಪನಿಯು ಮುಂದಾಗಿದೆ.

'ಟ್ರೆಂಡಿಂಗ್ ಟಾಪಿಕ್ಸ್' ಫೀಚರ್ ಎಕ್ಸ್‌ನ 'ವಾಟ್ಸ್ ಹ್ಯಾಪನಿಂಗ್' ಫೀಚರ್ ಮಾದರಿಯಂತಿದೆ. ವಾಟ್ಸ್ ಹ್ಯಾಪನಿಂಗ್‌ನಲ್ಲಿ ಲಭ್ಯವಿರುವಂತೆಯೇ ಟ್ರೆಂಡಿಂಗ್ ಟಾಪಿಕ್ಸ್‌ನಲ್ಲೂ ಸುದ್ದಿ, ಕ್ರೀಡೆ ಮತ್ತು ಮನರಂಜನೆಯಂತಹ ಇತರ ವಿಭಾಗಗಳನ್ನು ಒಳಗೊಂಡಿರಲಿದೆಯೇ ಎಂಬುದು ಸ್ಪಷ್ಟಗೊಂಡಿಲ್ಲ. ಮೆಟಾ ಉದ್ಯೋಗಿಗಳು ವಿಶೇಷ ಫೀಡ್ ಆಯ್ಕೆ ಹೊಂದಿದ್ದು, ಇತರ ಉದ್ಯೋಗಿಗಳಿಗೆ ಮಾತ್ರ ಕಾಣುವಂತೆ ಟ್ರೆಂಡಿಂಗ್ ಟಾಪಿಕ್ಸ್ ಫೀಚರ್ ಬಳಸುತ್ತಿದ್ದಾರೆ. ಉದ್ಯೋಗಿಯೊಬ್ಬರು ಕಣ್ತಪ್ಪಿನಿಂದ ಪಬ್ಲಿಕ್ ಟೈಮ್‌ಲೈನ್‌ನಲ್ಲಿ ಹೊಸ ಫೀಚರ್ ಬಗ್ಗೆ ಅಪ್‌ಡೇಟ್ ಮಾಡಿದ್ದಾರೆ. ಇದು ವೈರಲ್ ಆಗಿದೆ.

ಎಕ್ಸ್‌ಗೆ (ಹಿಂದಿನ ಟ್ವಿಟ್ಟರ್‌ಗೆ) ಪ್ರತಿಸ್ಪರ್ಧಿಯಾಗಿ ಬಂದ ಥ್ರೆಡ್ಸ್, ಬಿಡುಗಡೆಯಾದ ದಿನದಂದು ಹೆಚ್ಚು ಡೌನ್‌ಲೋಡ್ ಆದ ಆ್ಯಪ್ (ಗೇಮಿಂಗ್ ಆ್ಯಪ್ ಹೊರತಾಗಿ) ಎಂಬ ಹೆಸರು ಪಡೆದಿದೆ. ಆದರೆ, ಬಳಕೆದಾರರನ್ನು ತನ್ನ ಪ್ಲಾಟ್‌ಫಾರ್ಮ್‌ನಲ್ಲಿ ಸಕ್ರಿಯವಾಗಿಡಲು ಸದ್ಯ ಕೊಂಚ ಕಷ್ಟಪಡುತ್ತಿದೆ. ■